ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 25.02.2025.
**ಪಾಟೀ ಸವಾಲುಃ** ವಾದಿ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ

ನಿಪಿ-2ರಲ್ಲಿರುವ ನಿಪಿ-2(ಎ) ಸಹಿ ನನ್ನದೇ ಇರುತ್ತದೆ ಎಂದರೆ ಸರಿ. ನಿಪಿ-2ರಲ್ಲಿರುವ ಛಾಯಾಚಿತ್ರ ಮತ್ತು ಮತ್ತು ನಿಪಿ-2(ಸಿ) ಸಹಿ ನನ್ನದೇ ಇದೆ ಎಂದರೆ ಸರಿ. ನಾನು ನಿಪಿ-2ರಲ್ಲಿರುವ ಸಾಕ್ಷಿದಾರರಾದ ಗುಂಡಪ್ಪ, ಸುದಾಮ, ಪಾಂಡುರಂಗ ಮತ್ತು ಶಿವಶರಣಪ್ಪ ಮುಂದೆನೇ ನಿಪಿ-2ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಲಕ್ಷ್ಮಿಬಾಯಿ ತಾಯಿ ಚಂದವ್ವ ಬೆಳ್ಳಮಗಿ ಸಾಃ ಚಿಂಚನಸೂರು ಅಂದರೆ ನಾನೇ ಇರುತ್ತೇನೆ. ಚಿಂಚನಸೂರು ಗ್ರಾಮದಲ್ಲಿ ಚಂದವ್ವಳ ಮಗಳು ಲಕ್ಷ್ಮಿಬಾಯಿ ನಾನು ಒಬ್ಬಳೆ ಇರುತ್ತೇನೆ, ನನ್ನನ್ನು ಹೊರತುಪಡಿಸಿ ಬೇರೆ ಯಾರು ಇರುವುದಿಲ್ಲ ಎಂದರೆ ಸರಿ. ಈ ಕೇಸ್ ಹಾಕುವ ಮುಂಚೆ ವಾದಿ ತಮ್ಮ ವಕೀಲರ ಮುಖಾಂತರ ದಾವಾ ಜಮೀನನ್ನು ಖರೀದಿ ಮಾಡಿ ಕೊಡಿ ಎಂದು ನೋಟೀಸ್ ಕಳುಹಿಸಿದ್ದರು ಎಂದರೆ ಅದು ನನಗೆ ತಲುಪಿಲ್ಲ.

ನಿಪಿ-2ರಂತಹ ಸುಳ್ಳು ಕಾಗದ ಆಗಿದೆ ಎಂದು ನನಗೆ ಈ ಕೇಸ್ ಮಾಡಿದ ನಂತರ ಗೊತ್ತಾಗಿರುತ್ತದೆ. ವಾದಿ ನಿಪಿ-2ರಂತಹ ಸುಳ್ಳು ಕಾಗದ ಮಾಡಿಕೊಂಡಿರುತ್ತಾನೆ ಎಂದು ನಾನು ಆತನ ವಿರುದ್ಧ ಯಾವುದೇ ದೂರು ದಾಖಲೆ ಮಾಡಿರುವುದಿಲ್ಲ. ನಾನು ನನ್ನ ವಕೀಲರ ಮುಖಾಂತರ ಪ್ರತಿವಾದ ಪತ್ರದಲ್ಲಿ ನಿಪಿ-2ರ ಕಾಗದ ವಾದಿ ಸುಳ್ಳು ಮಾಡಿಕೊಂಡಿರುತ್ತಾರೆ ಎಂದು, ಅದನ್ನು ರದ್ದುಪಡಿಸಿ ಎಂದು ಯಾವುದೇ ಮಾಗನಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಹೆಸರಿನಲ್ಲಿ ಫಾರಂ ನಂ.10 ಮೇರೆಗೆ ಹಿಸ್ಸಾ ಪೋಡಿಯಾಗಿ ಸರ್ವೆ ನಂ.87/1 ಅಂತ ಆಗಿ ಮೂರು ವರ್ಷವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಮೂರು ವರ್ಷದ ಹಿಂದೆ ಸರ್ವೆ ಕಛೇರಿಯಲ್ಲಿ ನಿಪಿ-18ರಂತೆ ನನ್ನ ಹೆಸರಿನಲ್ಲಿ ಆಗಿದೆ ಎಂದರೆ ಸರಿ. ದಾವಾ ಸ್ವತ್ತಿನ ಕಬ್ಜಾ ನನ್ನದೇ ಇರುತ್ತದೆ ಎಂದರೆ ಸರಿ. ವಾದಿಗೆ ನಾನು ಇವತ್ತಿನವರೆಗೂ ಯಾವುದೇ ಹಣ ವಾಪಸ್ ಕೊಟ್ಟಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**